- -                                         **ಸಿ.ಸಿ. ನಂ.28/2025**

**ಪಿ. ಡಬ್ಲ್ಯೂ: 1**

**( ಇಂದು ದಿಃ 27/11/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಟಿ ಎನ್ ವಕೀಲರಿಂದ,**

ನಾನು ಪಿರ್ಯಾದಿ ಸಂಸ್ಥೆಯಲ್ಲಿ ಕಳೆದ 27 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ಸಾಲ ನೀಡುವಾಗ ನಾನು ಮ್ಯಾನೇಜರ್ ಆಗಿರಲಿಲ್ಲ. ಸದರಿ ಶಾಖೆಯಲ್ಲಿ ವ್ಯವಸ್ಥಾಪಕರು ಇದ್ದಾರೆ. ಅವರು ಬಂದು ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇಲ್ಲಾ. ಆರೋಪಿಗೆ 60 ಕಂತುಗಳ ವೈಯಕ್ತಿಕ ಸಾಲವನ್ನು ನೀಡಿದ್ದು ಸಾಲ ನೀಡುವ ಮೊದಲು ರೂ. 2500 ಶೇರಿನ ಮೊತ್ತ ಹಾಗೂ ರೂ. 5,000 ಅನ್ನು ಎಪ್ ಡಿ ಯನ್ನು ಪಡೆದಿರುತ್ತೇವೆ. ಸದರಿ ಪ್ರಕರಣ ನಡೆಸಲು ನನಗೆ ನಿರ್ದೇಶಕರ ಮಂಡಳಿಯವರು ಅಧಿಕಾರ ವನ್ನು ನೀಡಿದ ಬಗ್ಗೆ ಠರಾವು ಮಾಡಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆದರೆ ಸದರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಆರೋಪಿಯು ಬೇರೆಯವರ ಸಾಲಕ್ಕೆ ಜಾಮೀನುದಾರ ಆದ ಬಗೆ ್ಗ ದಾಖಲೆ ನೋಡಿ ಹೇಳಬಹುದು. ಆರೋಪಿ ಈ ಹಿಂದೆ ಪಡೆದ ಸಾಲವನ್ನು ಚುಕ್ತಾ ಮಾಡಿದ್ದಾರೆ. ಈ ಹಿಂದೆ ಪಡೆದ ಸಾಲದ ದಾಖಲೆಯನ್ನು ಆರೋಪಿಗೆ ನೀಡಿರುತ್ತಾರೆ. ಆರೋಪಿ ಯಾವ ದಿನಾಂಕಕ್ಕೆ ಚೆಕ್ಕನ್ನು ನೀಡಿದ್ದ ಬಗ್ಗೆ ಆವಕ ಜಾವಕ ಪುಸ್ತಕ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆದರೆ ಸದರಿ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಚೆಕ್ಕಿನ ಮೇಲೆ ಇರುವ ಬರವಣಿಗೆ ಮತ್ತು ಶಾಹಿಯಲ್ಲಿ ವ್ಯತ್ಯಾಸ ಕಂಡುಬರುತ್ತಿದೆ ಎಂದರೆ ಸರಿಯಲ್ಲ. ಸಾಲ ಕಟ್ಟು ಬಾಕಿ ಆದಾಗ ವಕೀಲರ ನೊಟೀಸನ್ನು ಜಾಮೀನುದಾರರಿಗೆ ನೀಡಿದ್ದು ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆರೊಪಿಗೆ ವಕೀಲರ ನೊಟೀಸನ್ನು ನೀಡಿದ್ದು ಇರುತ್ತದೆ. ನಮ್ಮ ಸಂಸ್ಥೆಯಲ್ಲಿ ಲೋನ್ ಲೆಡ್ಜರ್ ಇಲ್ಲಾ. ಆರೋಪಿ ಯಾವುದೇ ಕಂತನ್ನು ತುಂಬಿಲ್ಲಾ. ಆರೋಪಿ ಸಂಪೂರ್ಣ ಸಾಲ ಚುಕ್ತಾ ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿತಳು ಹಿಂದಿನ ಸಾಲದ ದಾಖಲೆಯಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿ ಆತಳ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರಕರಣ ದಾಖಲಿಸುವ ಉದ್ದೇಶದಿಂದ ಅದನ್ನು ಮರೆಮಾಚಿ ಚೆಕ್ಕನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತಳಿಗೆ ಯಾವುದೇ ನೊಟೀಸು ತಲುಪಿದ್ದೇ ಇಲ್ಲಾ ಎಂದರೆ ಸರಿಯಲ್ಲ. ನನಗೆ ಸದರಿ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಅಧಿಕಾರವನ್ನು ನೀಡಿದ್ದೇ ಇಲ್ಲಾ ಎಂದರೆ ಸರಿಯಲ್ಲ. ಚೆಕ್ಕಿನ ಮೇಲೆ ಇರುವ ಬರವಣಿಗೆ ನಮ್ಮದಾಗಿದೆ ಎಂದರೆ ಸರಿಯಲ್ಲ. ನಾನು ಸಾಲ ನೀಡುವಾಗ ವ್ಯವಸ್ಥಾಪಕನಾಗಿಲ್ಲದ ಕಾರಣ ನನಗೆ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲ. ನಿಪಿ 1 ರಿಂದ 11 ದಾಖಲೆ ಸದರಿ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾವೇ

ಆರೋಪಿಗೆ ಶೇರಿನ ಮೊತ್ತವನ್ನು ಹಾಗೂ ಎಫ  ಡಿ ಮೊತ್ತ ನೀಡಲು ಬಾಕಿ ಇದೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ಆರೋಪಿಯ ವಿರುದ್ಧ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**